ತಾಲ್ಲೂಕಾಗಲಿ ಅಥವಾ ಇನ್ನಾವುದೇ ತಾಲ್ಲೂಕಾಗಲೀ, ಪ್ರತಿ ಹತ್ತು ಸಾವಿರ ಜಾನುವಾರಗಳಿಗೊಂದರಂತೆ ವೆಟರ್ನರಿ ಡಿಸ್ಪೆನ್ಸರಿಗಳನ್ನು ಕೊಡಲು ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇವೆ ; ಈ ಬಗ್ಗೆ ಯೋಜನೆ ಹಾಕಿಕೊಂಡು ಪೈಕ್ಯರು ಸಿಕ್ಕಿದ ಹಾಗೆಲ್ಲ ಆಸ್ಪತ್ರೆಗಳನ್ನು ಮಂಜೂರು ಮಾಡುತ್ತಾ ಹೋಗುತ್ತೇವೆ.

ಶ್ರೀ ಎ. ಬಿ. ಪಡಗಿ.— ಮಾನ್ಯ ಮುಖ್ಯ ಮಂತ್ರಿಗಳ ಉತ್ತರ ಸಂತೋಷ ಮತ್ತು ಸಮಾಧಾನ ಕರವೂ ಆಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ, ರೋಗರುಜಿನಗಳಿಗೊಳಗಾದ ಜಾನುವಾರುಗಳನ್ನು ತತ್ಕಾಲಿಕವಾಗಿ ಉಪಚರಿಸಲಸುಕೂಲವಾಗುವಂತೆ ಕಾಂಪೌಂಡರ್ಸ್ ಮತ್ತು ಲೈವ್ ಸ್ಟಾಕ್ ಮನ್‌ಗಳಿಗೆ ಆರು ತಿಂಗಳು ತರಬೇತಿಯನ್ನು ನೀಡಿ ಕಳುಹಿಸಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್. —ಇದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ತರಬೇತಾಗದವರನ್ನು ಕಳುಹಿಸಿದರೆ ಇರುವ ಜಾನುವಾರಗಳನ್ನೂ ಸಾಯಿಸುತ್ತಾರೆ, ಅಷ್ಟೆ;

2-00 P M.

Providing Electricity in Gulbarga Taluk

841 SRI S. F. BHAIRY (Shahabad)—

SRI B. V. KAKKILAYA (Vittal)—

SRI PAMPAPATAI (Davanagere)—

Will the Minister of State for Information and Youth Services be pleased to state.—

(a) how many villages of Farutabad Hobli of Gulbarga taluk are electrified ;

(b) how many villages of the said Hobli are not electrified

(c) when will the remaining villages be electrified?

SRI K. H. SRINIVAS (Minister of State for Information and Youth Services).—

(a) 8.

(b) 17.

(c) As and when they are included in the village Electrification Programmes.

ಶ್ರೀ ಎಸ್. ಎಫ್. ಬೈರಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಗುಲ್ಬರ್ಗಾ ತಾಲ್ಲೂಕ್ಕಿನ ೮ ಹಳ್ಳಿಗಳಿಗೆ ವಿದ್ಯುತ್ತೀಕರಣ ಮಾಡಿದ್ದೇವೆ. ೧೭ ಹಳ್ಳಿಗಳಿಗೆ ವಿದ್ಯುತ್ತೀಕರಣ ಮಾಡಿಲ್ಲವೆಂದು ಹೇಳಿರುತ್ತಾರೆ. ೧೭ ಹಳ್ಳಿಗೆ ಇದುವರೆವಿಗೂ ಏತಕ್ಕೆ ವಿದ್ಯುತ್ತೀಕರಣ ಮಾಡಿಲ್ಲ, ಮತ್ತು ಇನ್ನು ಎಷ್ಟು ತಿಂಗಳಲ್ಲಿ ವಿದ್ಯುತ್ತೀಕರಣ ಮಾಡುತ್ತೀರಿ, ವಿದ್ಯುತ್ತೀಕರಣ ಮಾಡಬೇಕೆಂದು ಮಾಡಿರತಕ್ಕ ಲಿಸ್ಟ್‌ನಲ್ಲಿ ಈ ೧೭ ಹಳ್ಳಿಗಳೂ ಸೇರಿರುತ್ತವೆಯೇ ತಿಳಿಸಬೇಕು.

†ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿತಕ್ಕಂಥ ಎಲ್ಲ ಹಳ್ಳಿಗಳಿಗೂ ವಿದ್ಯುತ್ ಪೂರೈಕೆ ಮಾಡಬೇಕೆಂದು ಸರ್ಕಾರದ ನೀತಿಯಾಗಿರುತ್ತದೆ. ಈ ನೀತಿಗೆ ಬದ್ಧವಾಗಿ ಈ ವರ್ಷ ಹೊಸ ಹೊಸ ಹಳ್ಳಿಗಳನ್ನು ಈ ಕಾರ್ಯಕ್ರಮಕ್ಕೆ ಒಳಪಡಿಸಿದ್ದೇವೆ. ಕೆಲವೊಂದು ತೊಂದರೆಯಿಂದ ಅಂದರೆ ಸಾಕಷ್ಟು ಸಲಕರಣೆಗಳ ತೊಂದರೆಯಿಂದಾಗಿ ಗುಲ್ಬರ್ಗಾ ತಾಲ್ಲೂಕಿನ ೧೭ ಹಳ್ಳಿಗಳಿಗೆ ವಿದ್ಯುತ್

ಪೊರೈಕೆ ಮಾಡಲಾಗದೆ ಬಾಕಿ ಇರುತ್ತದೆ. ಇದರಲ್ಲಿ ಆರು ಹಳ್ಳಿಗಳಿಗೆ ವಿದ್ಯುತ್ತೀಕರಣಗೊಳಿಸಬೇಕೆಂದು ಶಿಫಾರಸ್ಸು ಬಂದಿರುವುದರಿಂದ ತಕ್ಷಣ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಉಳಿದಿರತಕ್ಕಂಥ ಹಳ್ಳಿಗಳಿಗೆ ವಿದ್ಯುತ್ತೀಕರಣಗೊಳಿಸುವ ಕ್ರಮವನ್ನು ನಂತರ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ತಮ್ಮ ಉತ್ತರದಲ್ಲಿ as and when they are included in the village Electrification Programmes, ಎಂದು ಹೇಳಿದ್ದೀರಾ. ಇದು ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ವಿದ್ಯುತ್ತೀಕರಣ ಆಗದೆ ಇರತಕ್ಕಂಥ ೧೭ ಗ್ರಾಮಗಳು ಏನು ಇರುತ್ತವೆ. ಇವುಗಳಿಗೆ ತೀವ್ರವಾಗಿ ವಿದ್ಯುತ್ತನ್ನು ಒದಗಿಸುವುದಕ್ಕೆ ಒಂದು ವರ್ಷದಲ್ಲಿ ಅಂದರೆ ಮುಂದಿನ ಯೋಜನೆಯಲ್ಲಾದರೂ ಸೇರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಹಿಂದುಳಿದಿರತಕ್ಕಂಥ ಪ್ರದೇಶವಾಗಿದ್ದ ಪಕ್ಷದಲ್ಲಿ ವಿದ್ಯುತ್ತೀಕರಣಗೊಳಿಸಲು ಸಾಕಷ್ಟು ಆದ್ಯತೆಯನ್ನು ಕೊಡಬೇಕೆಂದು ಸರ್ಕಾರದ ಉದ್ದೇಶವಾಗಿರುತ್ತದೆ. ಹಿಂದೆ ೧೯೭೨ ನೇ ಇಸವಿಯಲ್ಲಿ ಒಂದು ಪುಸ್ತಕವನ್ನು ಆಚ್ಚು ಹಾಕಿಸಿದ್ದರು, ಯಾವ ಯಾವ ಹಳ್ಳಿಗಳಿಗೆ ವಿದ್ಯುತ್ತೀಕರಣಗೊಳಿಸಬೇಕೆಂದು. ಆದರೆ ಇಷ್ಟೇ ಸಮಯದಲ್ಲಿ ಕೆಲಸವನ್ನು ಮಾಡಿ ಮುಗಿಸಬೇಕೆಂದು ನಿಗದಿ ಮಾಡಿಲ್ಲ. ೧೯೭೩ರ ನಂತರ ವಿದ್ಯುತ್ತೀಕರಣಗೊಳಿಸಬೇಕೆಂದು ಯಾವ ಯಾವ ಹಳ್ಳಿಗಳನ್ನು ಈ ಯೋಜನೆಯಲ್ಲಿ ಅಳವಡಿಸಿದ್ದೇವೆಯೋ ಅಂಥ ಕಡೆಗೆ ಆದ್ಯತೆಯನ್ನು ಕೋಟಿರುತ್ತೇವೆ. ಕೆಲವು ಕಡೆ ಸ್ವಲ್ಪ ಪ್ರಮಾಣದಲ್ಲಿ ಆಗಿದ್ದರೆ ಕೆಲವು ಕಡೆ ಹೆಚ್ಚಿನ ಪ್ರಮಾಣದಲ್ಲಿ ಆಗಿರುತ್ತದೆ. ಕೆಲವು ಕಡೆ ೧೦೦ಕ್ಕೆ ೧೧೦ರಷ್ಟು ಆಗಿದ್ದರೆ ಕೆಲವು ಕಡೆ ೮೦ ರಷ್ಟು ಆಗಿರತಕ್ಕಂಥದ್ದು ಇರುತ್ತದೆ. ಇದನ್ನು ಸರಿದೂಗಿಸ ಬೇಕೆಂಬ ದೃಷ್ಟಿಯಿಂದ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಈಗಾಗಲೇ ಇಲಾಖೆಗೆ ಸೂಚನೆ ಯನ್ನು ಕೊಟ್ಟಿರುತ್ತೇವೆ, ಆವರ ಶಿಫಾರಸು ಬಂದಮೇಲೆ, ಶಾಸನ ಸಭೆಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾರ್ಯಕ್ರಮವನ್ನು ಸಮರ್ಪಕವಾದ ರೀತಿಯಲ್ಲಿ ನಿರ್ವಹಿಸಬೇಕೆಂದು ಸರ್ಕಾರದ ಅಭಿಪ್ರಾಯವಾಗಿರುತ್ತೆ.

ಶ್ರೀ ಗೋವಿಂದ ಪಿ. ಒಡೆಯರ್.—ಮಾನ್ಯ ಮಂತ್ರಿಗಳು ಯಾವುದೋ ಒಂದು ಸಂದರ್ಭದಲ್ಲಿ ವರ್ಷ ಒಂದಕ್ಕೆ ೬೦೦-೬೫೦ ಹಳ್ಳಿಗಳಿಗೆ ವಿದ್ಯುತ್ತೀಕರಣ ಮಾಡುತ್ತೇವೆಂದು ಹೇಳಿದ್ದರು. ನಮ್ಮ ರಾಜ್ಯ ದಲ್ಲಿ ೨೬,೮೨೬ ಹಳ್ಳಿಗಳು ಇರುತ್ತದೆ. ಇದರ ಪೈಕಿ ನನಗೆ ತಿಳಿದ ಪ್ರಕಾರ ೧೫.೫೪೫ ಹಳ್ಳಿಗಳಿಗೆ ಮಾತ್ರ ವಿದ್ಯುತ್ತೀಕರಣವಾಗಿರುತ್ತದೆ. ಇನ್ನು ಉಳಿದ ೧೧ ಸಾವಿರ ಹಳ್ಳಿಗಳಿಗೆ ವಿದ್ಯುತ್ತೀಕರಣಗೊಳಿಸಬೇಕಾಗಿ ರುತ್ತದೆ. ತಾವು ಹೇಳಿರುವ ಲೆಕ್ಕದ ಪ್ರಕಾರವೇ ತೆಗೆದುಕೊಂಡರೂ ಕೂಡ ಇನ್ನು ೧೨-೧೩ ವರ್ಷಗ ಳಾದರೂ ಆಗಬಹುದು. ಅಲ್ಲಿ ತಾವು ಈಗ ಹಾಕಿಕೊಂಡಿರುವ ವೆಚ್ಚ ಅದರ ಎರಡರಷ್ಟು ಆಗಬಹುದು. ಆದ್ದರಿಂದ ತಾವು ಒಂದು ಕ್ರಾಷ್ ಪ್ರೋಗ್ರಾಮ್‌ನ್ನು ಹಾಕಿಕೊಳ್ಳಬೇಕೆಂದು ತಿಳಿಸುವುದಕ್ಕೆ ಇಷ್ಟಪಡು ತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಸರ್ಕಾರದವರು ಸರ್ವೇಸಾಮಾನ್ಯವಾಗಿ ಪ್ರತಿವರ್ಷ ೬೫೦ ಹಳ್ಳಿ ಗಳನ್ನಾದರೂ ವಿದ್ಯುತ್ತೀಕರಣಗೊಳಿಸಬೇಕೆಂದು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀದ್ದಾರೆ. ಇದಕ್ಕೆ ಸಂಬಂಧಪಟ್ಟಹಾಗೆ ಅಂಕಿ ಸಂಖ್ಯೆಗಳು ಇರುತ್ತವೆ. ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರೂ ಕೂಡ ಅನೇಕ ಕಾರ್ಯಕ್ರಮಗಳನ್ನು ರಾಜ್ಯದಲ್ಲಿ ಕೈಗೊಳ್ಳುತ್ತಿದ್ದಾರೆ. ಇದು ಆವ ಸಲ್ಲಿ ಸೇರಿಲ್ಲ. ಇದನ್ನೂ ಸೇರಿಸಿದರೆ ಸುಮಾರು ಪ್ರತಿವರ್ಷಕ್ಕೆ ೬೫೦ ರಿಂದ ೧೦೦೦ ಹಳ್ಳಿಗಳಿಗೂ ಜಾಸ್ತಿ ಯಾಗುತ್ತದೆ. ಕ್ರಾಷ್ ಪ್ರೋಗ್ರಾಮ್ ಎಂದು ಮಾಡುವುದಾದರೆ ಇದಕ್ಕೆ ಬೇಕಾದಂಥ ಹಣ ಮತ್ತು ಸಾಧನ ಸಲಕರಣೆಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೊರೈಕೆ ಮಾಡಬೇಕೆಂದು ಸರ್ಕಾರದ ನೀತಿ ಏನು ಇದೆ ಅದನ್ನು ತೀವ್ರಗೊಳಿಸುವತ್ತ ಪ್ರಯತ್ನ ಪಡುತ್ತೇವೆಂದು ಹೇಳುತ್ತಾ, ಹೇಗೆ ತೀವ್ರಗೊಳಿಸಬೇಕು ಎನ್ನುವುದರ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಸಲಹೆಗಳನ್ನು ಕೊಟ್ಟರೆ ಅವನ್ನು ಸ್ವಾಗತಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

MR. SPEAKER—Now question hour is our.